ಸಿ.ಸಿ. ನಂಬರ 156/2016

ಇ ಬಿ ಸಿ ಪಿಡಬ್ಲ್ಯೂ-1

ಸಾಕ್ಷಿದಾರರಿಗೆ ಇಂದು ದಿನಾಂಕಃ 10-03-2022 ರಂದು ಪ್ರಮಾಣ ವಚನ ಬೋಧಿಸಲಾಯಿತು.

**<u>ಮುಂದುವರೆದ ಸಾಕ್ಷ್ಯ ವಿಚಾರಣೆ: ಶ್ರೀ ಆರ್ ಹೆಚ್ ಎಸ್, ಫಿರ್ಯಾದುದಾರರ ಪರ ವಕೀಲರಿಂದಃ</u>**

ದಿಃ 15-01-2010 ಕ್ಕೆ 8+1 ಸಿಬಂದಿಗೆ ನೋಟೀಸ್ ಇಶ್ಯೂ ಮಾಡಿರುತ್ತೇವೆ. ಎರಡು ಹಾಜರಿ ಪುಸ್ತಕಗಳನ್ನು ಇಟ್ಟಿದ್ದು, ಒಂದು ಹಾಜರಿ ಪುಸ್ತಕ 01-03-2008 ರಿಂದ 28-01-2010, ಇನ್ನೊಂದು ಹಾಜರಿ ಪುಸ್ತಕ 01-03-2008 ರಿಂದ 31-01-2010 ಇವು ಪ್ಯಾರಲರ್ ಅಟೆಂಡೆನ್ಸ ರಿಜಿಸ್ಟರ್ ಗಳನ್ನು ಇಟ್ಟಿರುತ್ತೇವೆ. 15-01-2010 ಕ್ಕೆ ಎಲ್ಲರಿಗೂ ಮೀಟೀಂಗ್ ಕಾಲ್ ಮಾಡಿರುತ್ತೇವೆ. 17-01-2010 ಕ್ಕೆ ಲೋಕೆಶ ಗುರುವಯ್ಯ ನವರ್ ಇನ್ಚಾಜ ಹೆಡ್ ಮಾಸ್ಟರ್ ಹಾಗೂ ಎಸ್‌ಡಿಎ ಪಿಎಲ್ ದಾಸರ್ ಇವರು ಮೀಟಿಂಗ್ ಗೆ ಹಾಜರಾಗಿದ್ದರು. ಇನ್ನು ಉಳಿದ ಸಿಬಂದಿ ಗೈರು ಹಾಜರಾಗಿದ್ದರು. ಈ ಮೀಟಿಂಗ್ ನಲ್ಲಿ ಚರ್ಚೆ ಆಯಿತು. ಆಗ ಎರಡೂ ಹಾಜರಿ ಪುಸ್ತಕ ಹಾಜರುಪಡಿಸಿದರು. ಅಲ್ಲಿ ಯಾಕೆ ಎರಡು ಹಾಜರಿ ಪುಸ್ತಕ ಇಟ್ಟಿದ್ದೀರಿ ಅಂತಾ ಚರ್ಚೆ ಆಯಿತು. ನೀವು ಎಲ್ಲಾ ಸಿಬ್ಬಂದಿ ಹೇಳಿಕೆ ಕೊಡಬೇಕು ಅಂತಾ ಹೇಳಿದೆನು. ದಿಃ 18-01-2010 ಕ್ಕೆ ಶೋಕಾಸ್ ನೋಟೀಸ್ ಇಶ್ಯೂ ಆಯಿತು. ಆಮೇಲೆ 31-01-2017 ರ ಒಳಗಾಗಿ ನೋಟೀಸಿಗೆ ಉತ್ತರ ಕೊಡಲಿಕ್ಕೆ ಹೇಳಿದ್ದೆವು. ದಿಃ 05-02-2010 ಕ್ಕೆ ಅವರು ಹೇಳಿಕೆಗಳನ್ನು ಕೊಟ್ಟರು. ಆ ಹೇಳಿಕೆಗಳಲ್ಲಿ ಎಲ್ಲರೂ ಹಾರಿಕೆ ಉತ್ತರಗಳನ್ನು ಕೊಟ್ಟಿರುತ್ತಾರೆ. ಆನಂತರ ದಿಃ 01-05-2010 ರಂದು ಐದು ಸಿಬ್ಬಂದಿ ವರ್ಗದವರನ್ನು ಅಮಾನತಿನಲ್ಲಿ ಇಟ್ಟಿರುತ್ತೇವೆ. ಮೂರು ಸಿಬ್ಬಂದಿ ಕೆಲಸ ಮಾಡುತ್ತಿದ್ದರು. ಕ್ಲರ್ಕ ಒಬ್ಬರು ರಾಜೀನಾಮೆ ಕೊಟ್ಟರು. ದಿಃ 21-01-2010 ಕ್ಕೆ ರಾಜೀನಾಮೆ ಕೊಟ್ಟರು. ಇವುಗಳನ್ನು ಎನ್ಕೈರಿ ಮಾಡಲಿಕ್ಕೆ ಬಿಇಒ ಮತ್ತು ಡಿಡಿಪಿಐ, ಅಪರ ಆಯುಕ್ತರು ಧಾರವಾಡರವರಿಗೆ ಪರ್ಮೀಶನ್ ಕೇಳಿ ಒಬ್ಬರನ್ನು ಇನ್ವೆಸ್ಟಿಗೇಶನ್ ಮಾಡಲಿಕ್ಕೆ ನೇಮಿಸುವಂತೆ ಕೋರಿರುತ್ತೇವೆ. ದಿಃ 04-10-2011 ಕ್ಕೆ ಅವರು ಸ್ಪೆಶಲ್ ಆಫೀಸರನ್ನು ಆಪಾಯಿಂಟ್ ಮಾಡಿರುತ್ತಾರೆ. ಅವರು ಅಪಾಯಿಂಟ್ಮೆಂಟ್ ಆಗಿದ್ದಕ್ಕೆ ನಾವು ಆಡಳಿತ ಮಂಡಳಿಯನ್ನು ಸ್ಟಾಪ್ ಮಾಡಿರುತ್ತೇವೆ. ಆನಂತರ ನಾನು ನ್ಯಾಯಾಲಯದಲ್ಲಿ ನಿವೇದಿಸಿಕೊಂಡಿರುತ್ತೇನೆ. ದಿಃ 18-05-2011 ಕ್ಕೆ ನ್ಯಾಯಾಲಯದ ಮುಂದೆ ಅರ್ಜಿಯನ್ನು ಹಾಕಿರುತ್ತೇನೆ.

2. ತದನಂತರ ಎನಕ್ವೈರಿ ಸ್ಟಾರ್ಟ ಆಗಿರುತ್ತದೆ. ಎನ್ಕೈರಿ ಆಗಿ ಅವರ ವಿರುದ್ಧ ಪೋಲಿಸ್ ಸ್ಟೇಶನ್ಗೆ ದೂರು ಕೊಟ್ಟಿರುತ್ತಾರೆ. ಅಲ್ಲಿ ಎಫ್ ಐ ಆರ್ ಆದಮೇಲೆ ಬಿ ರಿಪೋರ್ಟ ಹಾಕಿರುತ್ತಾರೆ. ಸ್ಟೇಶನ್ ನಲ್ಲಿ ತನಿಖೆ ಆಗಿಲ್ಲ. ಅವರು ನಮ್ಮ ಅಪ್ಲಿಕೇಶನ್ ಕನ್ಸಿಡರ್ ಮಾಡದೆ ಬಿ ರಿಪೋರ್ಟ ಹಾಕಿರುತ್ತಾರೆ, ಸದ್ರಿ ಬಿ ರಿಪೋರ್ಟ ಸುಳ್ಳು ಆಗಿರುತ್ತದೆ. ನಂತರ ಇದೇ ನ್ಯಾಯಾಲಯದಲ್ಲಿ ಎಲ್ಲಾರೂ ಹಾಜರಾಗಿ ಜಾಮೀನು ಕೊಟ್ಟಿರುತ್ತಾರೆ. ಈ ಎಲ್ಲಾ ಕಾರಣಗಳಿಂದ ನಮಗೆ ನ್ಯಾಯಕೊಡಿಸಿಕೊಡುವಂತೆ ಕೋರಿಕೊಂಡಿರುತ್ತೇವೆ. 2010-11 ರ ಕಾರ್ಯಕಾರಿಣಿ ಮಂಡಳಿಯ ವಿಶೇಷ ರಿಜಿಸ್ಟರನ್ನು 30-12-2013 ರ ವಿಶೇಷ ಸಭೆಯ ರಿಜಿಸ್ಟರಿನ 47 ನೇ ಪುಟದಲ್ಲಿ ನಮೂದು ಮಾಡಿದ ರಿಜಿಸ್ಟರ್ ಹಾಜರು ಪಡಿಸಿದ್ದು ಅದನ್ನು ನಿಪಿ1 ಅಂತಾ, 2007-08 ರ ಮೂಲ ಹಾಜರಾತಿ ಪುಸ್ತಕವನ್ನು ಹಾಜರುಪಡಿಸಿದ್ದು ಅದನ್ನು ನಿಪಿ2 ಅಂತಾ,

ಖೊಟ್ಟಿಯಾಗಿ ಸೃಷ್ಟನೆ ಮಾಡಿ ಹಾಜರುಪಡಿಸಿದ್ದಂತಹ ಹಾಜರಾತಿ ಪುಸ್ತಕವನ್ನು ಹಾಜರುಪಡಿಸಿದ್ದು ಅದನ್ನು ನಿಪಿ3 ಅಂತಾ, ದಿಃ 13-02-2012 ರಂದು ಬಿ ಇ ಒ ರವರು ನೀಡಿರುವ ವರದಿಯನ್ನು ಹಾಜರುಪಡಿಸಿದ್ದು ಅದನ್ನು ನಿಪಿ4 ಅಂತಾ ಗುರುತಿಸಲಾಯಿತು.

ಮುಂದುವರೆದ ಮುಖ್ಯ ವಿಚಾರಣೆಗಾಗಿ ಮುಂದೂಡಲಾಯಿತು.

ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ಬೆರಳಚ್ಚು ಮಾಡಲಾಯಿತು.

ಓ .ಹೇ.ಕೇ. ಸರಿ ಇದೆ

ಪ್ರ.ದ.ನ್ಯಾ.ದಂ. ಮುಂಡಗೋಡ.